ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ನನಗೆ ಈಗ 33 ವರ್ಷ ವಯಸು. ನನ್ನ ಆಧಾರ್ ಮತ್ತು ರೇಷನ್ ಕಾರ್ಡ್ ಹಾಜರುಪಡಿಸಿರುತ್ತೇನೆ. ನನ್ನ ಬಳಿ ಬಿಪಿಎಲ್ ಕಾರ್ಡ್ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ದಿನ ನಾನು ಜಾಲಮಂಗಲಕ್ಕೆ ಹೋಗಿ ರಾಮನಗರಕ್ಕೆ ಹಿಂಬದಿ ಸವಾರನಾಗಿ ಬರುತ್ತಿದ್ದಾಗ ಗುಂಡಿ ಇದ್ದುದರಿಂದ ವೇಗವಾಗಿ ಹೋಗುತ್ತಿದ್ದ ನನ್ನ ಸ್ನೇಹಿತ ಬ್ರೇಕ್ ಹಾಕಿದ ಆಗ ನಾನು ಕೆಳಗೆ ಬಿದ್ದು ನನ್ನ ಬಲಗಾಲಿಗೆ ಪೆಟ್ಟಾಗಿರುತ್ತದೆ. ನನ್ನ ಸ್ನೇಹಿತನ ಹೆಸರು ಪವನ್ ಕುಮಾರ್. ನನ್ನ ಬಳಿ ಡಿ.ಎಲ್ ಇದೆ. ಅಪಘಾತವಾದ ಸಮಯದಲ್ಲಿ ನನ್ನ ಬಳಿ ಡಿ.ಎಲ್ ಇತ್ತು. ಅದನ್ನು ಹಾಜರುಪಡಿಸುತ್ತೇನೆ. ನನಗೆ ಪ್ರಜ್ಞೆ ಇರಲಿಲ್ಲ ನನ್ನ ಸ್ನೇಹಿತನಿಗೆ ಪಟ್ಟಾಗಿರುವ ಬಗ್ಗೆ ಗೊತ್ತಾಗಿಲ್ಲ. ಆಸ್ಪತ್ರೆಗೆ ನನ್ನನ್ನು ಯಾರೋಸಾರ್ವಜನಿಕರುಸೇರಿಸಿರುತ್ತಾರೆ. ನನ್ನ ಜೊತೆ ನನ್ನ ಸ್ನೇಹಿತನ್ನು ಆಸ್ಪತ್ರೆಗೆ ಸೇರಿಸಿದ ಬಗ್ಗೆ ಗೊತ್ತಲ್ಲ. ನನ್ನ ಸ್ನೇಹಿತನನ್ನು ಸಾಕ್ಷಿ ನುಡಿಸುತ್ತೇನೆ.

ಅಪಘಾತವಾದ ದಿನ ನಾನೇ ವಾಹನವನ್ನು ಡಿ.ಎಲ್ ಇಲ್ಲದೇ ನಾನು ಚಲಾಯಿಸಿ ಬಿದ್ದು ಗಾಯ ಗೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಚಿಕಿತ್ಸೆ ನೀಡಿದ ವೈದ್ಯರ್‌ನ ಸಾಕ್ಷಿ ಮಾಡಿಸುತ್ತೇನೆ. ಕಣ್ಣಾರೆ ನೋಡಿದವರನ್ನು ಸಾಕ್ಷಿ ಮಾಡಿಸುತ್ತೇನೆ. ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಎಂದು ಹೇಳಿರುವ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಬಲಗಾಲಿಗೆ ರಾಡ್ ಹಾಕಿರುತ್ತಾರೆ. ಅದನ್ನು ಇನ್ನು ಹೊರ ತೆಗೆಸಿಲ್ಲ. ನಾನು ಆಸ್ಪತ್ರೆಯಲ್ಲಿ ಒಳರೋಗಿ ದಾಖಲಾಗಿಲ್ಲ ಎಂದರೆ ಸರಿಯಲ್ಲ. ಮುಂದುವರೆದ ಚಿಕಿತ್ಸೆ

ಪಡೆಯಲು ಆಸ್ಪತ್ರೆಗೆ ಹೋಗಿ ಬರಲು ಖರ್ಚಾಗಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ನನಗೆ ವರಮಾನ ಬರುತ್ತಿದ್ದ ದಾಖಲೆ ಹಾಜರುಪಡಿಸಿಲ್ಲ. ಪರಿಹಾರ ಪಡೆಯಲು ಈ ವಿಚಾರವಾಗಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಿಂದ ನನಗೆ ಯಾವುದೇ ಆರ್ಥಿಕ ಮತ್ತು ದೈಹಿಕವಾಗಿ ನಷ್ಟ ಉಂಟಾಗಿಲ್ಲದೇ ಇದ್ದರೂ ಸಹ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು